‘ನಿನ್ನೊಂದಿಗೆ ಡಾಕ್ಟರಮ್ಮನ ಕೋಣೆಗೆ ಬಂದವರು ನಿನ್ನ ಪತಿರಾಯರಾ? ಎಂದು ಕೇಳಿದಳು ತ್ರಿವೇಣಿ. ‘ಅಲ್ಲ, ಅವರು ನಮ್ಮೂರಿನ ಆರ್.ಎಂ.ಪಿ ಡಾಕ್ಟರು, ನಮ್ಮವರು ತೀರಿಕೊಂಡಿದ್ದಾರೆ’ ಎಂದು ಉತ್ತರಿಸಿದಳು ಇಪ್ಪತ್ತು ವರ್ಷದ ಬಾಲಮಣಿ.

‘ಅಯ್ಯೋ, ಆಸ್ಪತ್ರೆಯಲ್ಲಿರುತ್ತೀಯಲ್ಲಾ, ಅದಕ್ಕಾಗಿ ಮಾಂಗಲ್ಯ, ಕಾಲುಂಗುರಗಳನ್ನು ತೆಗೆದು ಇಟ್ಟಿರುವಿಯೇನೋ ಅಂದುಕೊಂಡೆ, ಬೇರೆ ತಿಳಿಯಬೇಡ’ ಎಂದು ನೋವಿನಿಂದ ನುಡಿದ ತ್ರಿವೇಣಿ ಮತ್ತೆ ಕೇಳಿದಳು ‘ನಿಮ್ಮವರು ಏಕೆ ತೀರಿಕೊಂಡರು?’

‘ಅವರು ದುಬಾಯಿಯಲ್ಲಿ ಕಟ್ಟಡ ಕೆಲಸಕ್ಕೆ ಹೋದಾಗ ಮೇಲಿನಿಂದ ಕೆಳಕ್ಕೆ ಜಾರಿ ಬಿದ್ದು ತೀರಿಕೊಂಡರು. ಆಗಲೇ ವರ್ಷವಾಯಿತು’ ಎಂದು ವಿವರಿಸಿದಳು.

‘ಅಯ್ಯೋ, ನೀನಿನ್ನೂ ಸಣ್ಣ ವಯಸ್ಸಿನವಳು ಪಾಪ’ ಎಂದು ಮರುಕ ತೋರಿದಳು ತ್ರಿವೇಣಿ, ಬಾಲಮಣಿಯ ತುಂಬು ಗರ್ಭವನ್ನು ತೋರಿಸುತ್ತಾ ‘ಇದೇ ಮೊದಲನೇದಾ?’ ಎಂದು ಕೇಳಿದಳು.

“ಇದಕ್ಕೆ ಮೊದಲಿನ ಗಂಡು ಮಗು ಫಿಟ್ಸ್ ಬಂದು ಕಾಲವಾದ. ಎರಡು ವರ್ಷಗಳಾದವು’ ಎಂದಳು ಬಾಲಮಣಿ. ‘ಅಯ್ಯಯ್ಯೋ ಎಷ್ಟು ವರ್ಷದ ಹುಡುಗ?’ ಎಂದಳು ತ್ರಿವೇಣಿ.

‘ಮೂರು ವರ್ಷ ತುಂಬಿದ್ದವು’ ಎಂದಳು ಬಾಲಮಣಿ.

ಆಗ ತ್ರಿವೇಣಿ ‘ನಾನು ಕೇಳಿದ್ದು ಈ ರೀತಿಯಲ್ಲಿ ಇದು ಮೊದಲನೇದಾ?’ ಎಂದು ಕೇಳಿದಳು. ‘ಹ್ಞೂಂ’ ಎಂದಳು ಬಾಲಮಣಿ.

“ನನಗೆ ಇದು ಎರಡನೇ ಸಲ. ನಮ್ಮೂರು ಗುಂಟೂರಿನ ಹತ್ತಿರ ನಿಮ್ಮದು?’ ಎಂದಳು ತ್ರಿವೇಣಿ.

‘ಕರೀಂನಗರ್ ಆ ಕಡೆ’ ಎಂದಳು ಬಾಲಮಣಿ.

‘ಮಗುವನ್ನು ಗರ್ಭದಲ್ಲಿ ಧರಿಸುವುದಕ್ಕೆ ಎಷ್ಟು ಕೊಡ್ತಾರಂತೆ?’ ಎಂದು ಮೆಲ್ಲಗೆ ಬಾಲಮಣಿಯ ಕಿವಿಯಲ್ಲಿ ಕೇಳಿದಳು ತ್ರಿವೇಣಿ. ‘ಮೂರು ಲಕ್ಷ ಕೊಡುವುದಾಗಿ ಹೇಳಿದ್ದಾರೆ ಅಡ್ವಾನ್ಸ್ ಎಂದು ಕೊಟ್ಟ ಒಂದೂವರೆ ಲಕ್ಷ ನಮ್ಮ ಆರ್.ಎಂ.ಪಿ ಐವತ್ತು ಸಾವಿರ ತಗೊಂಡಿದ್ದಾನೆ’ ಎಂದು ವಿವರಿಸಿದಳು ಬಾಲಮಣಿ.

‘ಪರವಾ ಇಲ್ಲ, ನಿನಗೆ ಮೂರು ಲಕ್ಷ ಕೊಡ್ತಿದ್ದಾರೆ. ನನಗಾದರೋ ಕೇವಲ ಒಂದೂವರೆ ಲಕ್ಷ. ಮಾರ್ವಾಡಿಯ ಪಿಂಡವನ್ನು ಗರ್ಭದಲ್ಲಿ ಹೊರುತ್ತಿದ್ದೇನೆ. ಅವರು ಕೋಟ್ಯಾಧಿಪತಿಗಳಂತೆ, ಆದರೆ ಜಿಪುಣರು. ಇಷ್ಟು ವರ್ಷ ಮಕ್ಕಳಿಲ್ಲವೆಂದು ಕೊರಗುತ್ತಿದ್ದರು. ಕೇವಲ ಒಂದೂವರೆ ಲಕ್ಷ ಕೊಡ್ತಿದ್ದಾರೆ’ ಎನ್ನುತ್ತಾ, ‘ನೀನು ಯಾರ ಮಗುವನ್ನು ಹೊರುತ್ತಿದ್ದೀಯಾ?’ ಎಂದಳು.

‘ಗೊತ್ತಿಲ್ಲ, ಅವರು ಹೇಳಲ್ಲ, ನಮ್ಮ ಆರ್.ಎಂ.ಪಿ. ಡಾಕ್ಟ್ರ ಹತ್ತಿರ ಡಾಕ್ಟ್ರಮ್ಮ ಹೇಳುವಾಗ ಕೇಳಿಸಿದ್ದು, ಅವರು ಇರಾನ್ ದೇಶದಲ್ಲಿದ್ದಾರಂತೆ. ಗಂಡ—ಹೆಂಡತಿ ಇಬ್ಬರೂ ಡಾಕ್ಟರಂತೆ’ ಎಂದು ತನ್ನ ಸ್ವಂತ ವಿಷಯಕ್ಕೆ ಬಂದಳು ಬಾಲಮಣಿ.

‘ಊರಲ್ಲಿ ನಮಗೆ ಎರಡು ಎಕರೆ ಹೊಲ ಇದೆ. ನಮ್ಮಾತ ದುಬಾಯಿಗೆ ಹೋಗುವಾಗ ಹಣ ಬೇಕಾದ್ದರಿಂದ ನಮ್ಮೂರ ಸಾವುಕಾರರಲ್ಲಿ ಅಡವು ಇಟ್ಟೆವು. ನನ್ನ ಮಗನಿಗೆ ಅನಾರೋಗ್ಯವಾದಾಗಲೂ ಅವರೇ ಸಾಲ ಕೊಟ್ಟರು. ಬಡ್ಡಿಯಿಲ್ಲದೇ ಐದು ಲಕ್ಷ ಸಾಲವಾಗಿದೆ. ಪಾಪ ಸಾಹುಕಾರ ನನ್ನ ಗಂಡ ಸತ್ತನೆಂದು ಬಡ್ಡಿ ಮಾಫಿ ಮಾಡಿದ್ದಾನೆ. ಅಸಲು ಮಾತ್ರ ಕಟ್ಟಲು ತಿಳಿಸಿದ್ದಾನೆ. ಅಷ್ಟು ಕಟ್ಟಿದರೆ ಹೊಲ ನಮ್ಮದಾಗುತ್ತದೆ.’

‘ಮಳೆ ಇಲ್ಲದೇ ಕೂಲಿ ಕೆಲಸವೂ ಇಲ್ಲ. ಭಿವಂಡಿಗೆ ಹೋಗಬೇಕೆಂದುಕೊಂಡೆ. ಆಗ ನಮ್ಮೂರಿನ ಡಾಕ್ಟರು ಇಲ್ಲಿಗೆ ಕರೆ ತಂದರು. ಈ ವಿಷಯ ನಮ್ಮೂರಿನಲ್ಲಿ ಯಾರಿಗೂ ಗೊತ್ತಿಲ್ಲ. ನಾನು ಭಿವಂಡಿಗೆ ಹೋಗ್ತಿದ್ದೇನೆ ಎಂದು ನಮ್ಮವರಿಗೆ ಹೇಳಿ ಬಸ್ ಹತ್ತಿ ಇಲ್ಲಿಗೆ ಬಂದೆ. ಈಗ ಹತ್ತು ತಿಂಗಳಾಯಿತು ಎಂದು ಬೇಸರದಿಂದ ನುಡಿದಳು ಬಾಲಮಣಿ. ‘ಮಗುವನ್ನು ಹಡೆದ ಕೂಡಲೇ ಹಣ ಕೊಡ್ತಾರೆ, ಚಿಂತಿಸಬೇಡ’ ಎಂದು ಬಾಲಮಣಿಯ ಭುಜದ ಮೇಲೆ ಕೈಹಾಕಿ ಧೈರ್ಯ ತುಂಬಿದಳು ತ್ರಿವೇಣಿ.

ಮರುದಿನ ಸಾಯಂಕಾಲ ಆರು ಗಂಟೆಯ ಸಮಯಕ್ಕೆ ಆರ್.ಎಂ.ಪಿ. ಡಾಕ್ಟ್ರು ಬಂದ. ಆತನನ್ನು ನೋಡಿ ಬಾಲಮಣಿ ಮಟ್ಟಸವಾಗಿ ಕೂತಳು.

‘ಆರಾಮ ಇದ್ದೀಯಾ?’ ಎಂದು ಬಾಲಮಣಿಯನ್ನು ವಿಚಾರಿಸುತ್ತಾ ಆತ ಮಂಚಕ್ಕೆ ಎದುರಿನ ಕುರ್ಚಿಯಲ್ಲಿ ಕುಳಿತ. ‘ನಾಳೆ ಮುಂಜಾನೆ ನಿನಗೆ ಆಪರೇಷನ್ ಮಾಡ್ತಾರಂತೆ’ ಎಂದರು.

